ಶ್ರೀ ಎ. ಎಂ. ಹಿಂಡಸ್‌ಗೇರಿ:– ಈ ಹಿಂದೆ ಆಗಿರುವುದಕ್ಕೂ ಇದೇ ಹೇಳುತ್ತಿದ್ದರು. ಮತ್ತೆ ಮೊನ್ನೆ 2–3 ತಿಂಗಳಲ್ಲಿ ಗಲಭೆಯಾದಂಥ ಕಾಲದಲ್ಲಿ ಸುಮಾರು 78 ಜನ ರಾಯಚೂರಿನಲ್ಲಿ ತೀರಿಕೊಂಡರು. ಇದಕ್ಕೆ ರೂಲ್ಸ್ ರೆಗ್ಯುಲೇಷನ್ ಮಾಡಬೇಕೆಂದು ಹೇಳಿ ಟೈಮ್ ಹಾಳಾಗುತ್ತಿದೆ. ಅದಕ್ಕೆ ನಿಗಧಿಯಾದ ಸಮಯದಲ್ಲಿ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಮತ್ತೆ ಒಂದು ಲಕ್ಷ ರೂಪಾಯಿ ಕೊಟ್ಟಿರುವ ಬಗ್ಗೆ ನನ್ನ ಪ್ರಶ್ನೆಗೆ ಅವತ್ತು ಉತ್ತರಕೊಟ್ಟಿದ್ದರು. ಮೊನ್ನೆ ನಾನು ನನ್ನ ಕಾನ್‌ಸ್ಟಿಟ್ಯೂಯೆನ್ಸಿಗೆ ಹೋಗಿದ್ದಾಗ ಡಿ.ಸಿ.ಯವರನ್ನು ಕೇಳಿದರೆ, ಇನ್ನೂ ತನಕ ನಮಗೆ ಅದರ ಬಗ್ಗೆ ಆರ್ಡರ್ ಬಂದಿಲ್ಲವೆಂದು ಹೇಳುತ್ತಾರೆ. ಇದರಿಂದ ಬಹಳಷ್ಟು ತೊಂದರೆಯಾಗುತ್ತಿದೆ. ನೌಕರಿ ಕೊಡುವುದರಲ್ಲಿ ಆದಷ್ಟು ತೀವ್ರವಾಗಿ ಒಂದು ನಿಗದಿತ ಸಮಯದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಒಂದು ತಿಂಗಳು ಅಥವಾ 15 ದಿವಸ ಎಂದು ಸಮಯ ಹೇಳಬೇಕು. ಮತ್ತು ಧನ ಸಹಾಯ ಏನು ಬಿಡುಗಡೆ ಮಾಡುತ್ತೀರಿ ಅದನ್ನು ಆದಷ್ಟು ತೀವ್ರವಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಆ ವಿಷಯವನ್ನು ನಾವು ಒಪ್ಪುತ್ತೇವೆ. ಆದರೆ it is based on rule of law.

ಸರ್ಕಾರ ಒಂದು ನೀತಿ ನಿರ್ಧಾರ ಮೊದಲು ಮಾಡುತ್ತದೆ. ಅದು ಆಚರಣೆಗೆ ಬರಬೇಕಾದರೆ ಕಾನೂನುಗಳನ್ನು ಮಾಡಿ, ನಿಯಮಗಳನ್ನು ಮಾಡಿ ಆಚರಣೆಗೆ ತರಬೇಕಾಗುತ್ತದೆ. ಅದು ಸ್ವಲ್ಪ ತಡವಾಗುತ್ತದೆ. ಮಾನ್ಯ ಸದಸ್ಯರು ಇದನ್ನು ತಿಳಿದು ಸಹಕರಿಸಬೇಕು.

ರಾಜ್ಯದಲ್ಲಿ ವಿಶೇಷ ಆದ್ಯತೆ ಮೇರೆಗೆ ಸಿ.ಎಲ್. 2 ಪರವಾನಗಿ ನೀಡಿಕೆ.

192 (890): ಶ್ರೀ ಟಿ.ಬಿ. ಜಯಚಂದ್ರ (ಕಳಂಬೆಳ್ಳ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ವಿಶೇಷ ಆದ್ಯತೆ ಮೇರೆಗೆ ಸಿಎಲ್–2 ಪರವಾನಗಿಗಾಗಿ ಹಣ ಕಟ್ಟಿ ಸರ್ಕಾರದ ಅನುಮತಿಗಾಗಿ ಕಾಯುತ್ತಿರುವ ಪರವಾನಗಿದಾರರ ಸಂಖ್ಯೆ ಎಷ್ಟು:

ಆ. ಪರವಾನಗಿದಾರರು ಹಣ ಸಂದಾಯ ಮಾಡಿದ್ದು, ಇದುವರೆಗೂ ಅನುಮತಿ ನೀಡದೆ ಇರಲು ಕಾರಣವೇನು ? ಹಾಗೂ ಪರವಾನಿಗೆ ನೀಡುವುದು ಯಾವಾಗ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. 152 ಪರವಾನಗಿ ಅರ್ಜಿದಾರರು.

ಆ. ಸಿಎಲ್–2 ಲೈಸನ್ಸ್‌ಗಳ ಹೆಚ್ಚಳಿಕೆ ಬಗ್ಗೆ ಹೆಚ್ಚು ಹೆಚ್ಚು ದೂರಿನ ಮನವಿಗಳ ಬರುವಿಕೆ ಇಂದಾಗಿ, ಸಿಎಲ್–2 ಲೈಸನ್ಸ್ ಮಂಜೂರು ಮಾಡುವುದನ್ನು ಸಧ್ಯಕ್ಕೆ ತಡೆಹಿಡಿಯಲಾಗಿದೆ.

1991ರ ಜನ ಗಣತಿ ಆಧಾರದ ಮೇಲೆ ಸಿಎಲ್–2 ಲೈಸನ್ಸ್‌ನ ಕೋಟಾವನ್ನು ಪರಿಷ್ಕರಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಿಶೇಷ ಆದ್ಯತೆ ಮೇರೆಗೆ ಸಿಎಲ್–2 ಪರವಾನಗಿಗಾಗಿ ಹಣಕಟ್ಟಿ ಸರ್ಕಾರದ ಅನುಮತಿಗಾಗಿ ಕಾಯುತ್ತಾ ಇರುವ ಪರವಾನಗಿದಾರರ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಹೇಳಿದ್ದೇನೆ, ಅದಕ್ಕೆ 152 ಜನರು ಎಂದು ತಿಳಿಸಿದ್ದೀರಿ. ಪರವಾನಗಿದಾರರು ಹಣ ಸಂದಾಯ ಮಾಡಿದ್ದು ಇದುವರೆಗೂ ಅನುಮತಿ ನೀಡದೆ ಇರಲು ಕಾರಣ ಏನು ಅಂದರೆ. ಸಿಎಲ್–2

ಲೈಸನ್ಸ್‌ಗಳ ಹೆಚ್ಚಳಿಕೆ ಬಗ್ಗೆ ಹೆಚ್ಚು ಹೆಚ್ಚು ದೂರಿನ ಮನವಿಗಳ ಬರುವಿಕೆಯಿಂದಾಗಿ, ಸಿಎಲ್-2 ಲೈಸನ್ಸ್ ಮಂಜೂರು ಮಾಡುವುದನ್ನು ಸಧ್ಯಕ್ಕೆ ತಡೆಹಿಡಿಯಲಾಗಿದೆ, 1991ರ ಜನಗಣತಿ ಆಧಾರದ ಮೇಲೆ ಸಿಎಲ್-2ಲೈಸನ್ಸ್ ಕೋಟಾವನ್ನು ಪರಿಷ್ಕರಿಸಲಾಗುವುದು ಎಂದು ತಿಳಿಸಿದ್ದಾರೆ. ನೀವು ವಿಶೇಷ ಆದ್ಯತೆಯ ಮೇರೆಗೆ ಎಂದು ಕೊಟ್ಟಾಗ ಹೀಗೆ ಕೊಟ್ಟಿದ್ದು ಏಕೆ ಮತ್ತು ಕೊಟ್ಟಿದ್ದನ್ನು ತಡೆಹಿಡಿದದ್ದು ಏಕೆ ? 152ರಲ್ಲಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಬರುತ್ತದೆ ಎಂದು ತಿಳಿಸುತ್ತೀರಾ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ತುಮಕೂರು ಜಿಲ್ಲೆಯಲ್ಲಿ ಎಷ್ಟು ಎಂದು ಕೇಳಿದ್ದಾರೆ ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಈ ಲೈಸನ್ಸ್‌ನ್ನು ಕೊಡಬೇಕಾದರೆ ಕೆಲವು ನಿಯಮಗಳು ಇವೆ. ಪಟ್ಟಣಗಳಲ್ಲಿ ಏಳೂವರೆ ಸಾವಿರ ಜನಸಂಖ್ಯೆಗೆ ಒಂದು ಲೈಸನ್ಸ್ ಕೊಡಬೇಕೆಂದು ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ 15 ಸಾವಿರ ಜನಸಂಖ್ಯೆಗೆ ಒಂದು ಕೊಡಬೇಕೆಂದು ಇದೆ. ಈಗಾಗಲೇ ಕೊಟ್ಟಿದ್ದರಲ್ಲಿ ಈ ಒಂದು ಪ್ರಮಾಣಕ್ಕೆ ಮೀರಿ, ಕೊಟ್ಟಿರುವುದರಿಂದ ಸರ್ಕಾರ ಅದನ್ನು ತಡೆಹಿಡಿದಿದೆ. ಸರ್ಕಾರದ ಈಗೀನ ಧೋರಣೆಯ ಪ್ರಕಾರ ಹೆಚ್ಚು ಲೈಸನ್ಸ್‌ಗಳನ್ನು ಕೊಡಬಾರದು ಎಂದು ಇದೆ. ಹಾಗಾಗಿ ಮುಂದಿನ ಲೈಸನ್ಸ್ ಕೊಡುವುದನ್ನು ನಿಲ್ಲಿಸಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ:– ಮಾನ್ಯ ಸಭಾಧ್ಯಕ್ಷರೇ, ನನ್ನ ಪ್ರಶ್ನೆಯನ್ನು ಸನ್ಮಾನ್ಯ ಸಚಿವರು ಅರ್ಥಮಾಡಿಕೊಂಡಿಲ್ಲ. ನೀವು ಲೈಸೆನ್ಸ್ ಕೊಡುವುದಕ್ಕಿಂತ ಮುಂಚೆ ಇರುವ ಎಲ್ಲಾ ನಿಯಮಗಳನ್ನು ಪರಿಶೀಲಿಸಿ ಕೊಡಬೇಕಾಗುತ್ತದೆ. ಹೀಗೆ ಕೊಟ್ಟಾದ ಮೇಲೆ ತಡೆಹಿಡಿಯತಕ್ಕಂಥಾದ್ದು ಏನಿದೆ ? ನೀವು ಪರವಾನಿಗೆಗಳನ್ನು ಹೆಚ್ಚು ಕೊಡಿ ಎಂಬ ಬಗ್ಗೆ ನಾನು ಒತ್ತಾಯ ಮಾಡುವುದಿಲ್ಲ. ನಾನು ಈಗ ಕೇಳುತ್ತಿರುವ ಪ್ರಶ್ನೆಯನ್ನು ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. ಕುಡಿಯುವವರ ಕಷ್ಟ ತಮಗೆ ಗೊತ್ತಿಲ್ಲ ಎಂದು ಕಾಣುತ್ತದೆ. 1991ರ ಜನಗಣತಿಯ ಆಧಾರದ ಮೇಲೆ ಕೋಟಾವನ್ನು ಫಿಕ್ಸ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಆ ಪ್ರಕಾರ ಕೋಟ ಫಿಕ್ಸ್ ಮಾಡುವಾಗ ಅವರಿಗೆ ಆದ್ಯತೆಯ ಮೇಲೆ ಕೊಡುತ್ತೀರಾ ? ಇವೊತ್ತು ಒಂದು ಲೈಸನ್ಸ್ ಪಡೆಯಲು ಪರವಾನಿಗೆದಾರರಿಗೆ ಎರಡು ಲಕ್ಷ ರೂಪಾಯಿಗಳ ಖರ್ಚು ಆಗುತ್ತದೆ. ಬೇರೆ ಜಿಲ್ಲೆಯ ವಿಚಾರ ನನಗೆ ಗೊತ್ತಿಲ್ಲ, ಆದರೆ ತುಮಕೂರು ಜಿಲ್ಲೆಯಲ್ಲಿ ಒಬ್ಬರು ಎಕ್ಸೈಸ್ ಸೂಪರಿಂಟೆಂಡೆಂಟ್ ಇದ್ದಾರೆ, ಅವರಿಗೆ ಬರೀ 50ಸಾವಿರ ರೂಪಾಯಿಗಳ ಲಂಚವನ್ನೇ ಕೊಡಬೇಕಾಗುತ್ತದೆ. ಹೀಗಿರುವಾಗ ಬೇರೆ ಖರ್ಚುವೆಚ್ಚಗಳು ಒಂದೂವರೆ ಲಕ್ಷ ರೂಪಾಯಿಗಳು ಬರುತ್ತವೆ. ಈಗ ನೀವು ಲೈಸೆನ್ಸ್ ಕೊಡದಿದ್ದರೆ ಅವರು ಕೊಟ್ಟ ಹಣವೂ ಹೋಯಿತು ಕೊಟ್ಟ ಹಣ ವಾಪಸ್ ಬರುವ ಹಾಗಿಲ್ಲ, ನೀವು ಲೈಸೆನ್ಸ್ ಕೊಡುವ ಹಾಗಿಲ್ಲ, ಜನರಿಗೆ ತೊಂದರೆಯಾಗುತ್ತದೆ. ಸರ್ಕಾರದ ದ್ವಂದ್ವ ನೀತಿಗಳು ಏನೇ ಇರಲಿ, ಅದರಿಂದ ಜನರಿಗೆ ತೊಂದರೆಯಾಗಬಾರದು. 1991ರ ಜನಸಂಖ್ಯೆಯ ಆಧಾರದ ಮೇಲೆ ಕೋಟಾ ಫಿಕ್ಸ್ ಮಾಡುವಾಗ ಆದ್ಯತೆಯ ಮೇಲೆ ಕೊಡುತ್ತೀರ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಪರವಾನಿಗೆಯನ್ನು ಕೊಟ್ಟು ನಾವು ಯಾರಿಂದಲೂ ವಾಪಸ್ ತೆಗೆದುಕೊಂಡಿಲ್ಲ. ಪರವಾನಿಗೆಗಾಗಿ ಅರ್ಜಿ ಯಾರು ಕೊಟ್ಟಿದ್ದಾರೆ ಅವರಿಗೆ ಕೊಟ್ಟಿಲ್ಲ ಅಷ್ಟೆ. ತಡೆಹಿಡಿಯಲಾಗಿದೆ ಅಂದರೆ ಮುಂದೆ ಪರವಾನಿಗೆಯನ್ನು ಕೊಡುವುದಿಲ್ಲ ಎಂದು ಅರ್ಥ. ಪರಪಾನಗಿ ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದರೆ, ಆಗ ತಮ್ಮ ಕೋರಿಕೆಯ ಪ್ರಕಾರ ಆದ್ಯತೆಯ ಮೇಲೆ ಕೊಡುತ್ತೇವೆ.

ಗೃಹ ಇಲಾಖೆಯ ಶೀಘ್ರಲಿಪಿಗಾರರಿಗೆ ಬಡ್ತಿ

194 (692): ಶ್ರೀಮತಿ ಸುಮಾ ವಸಂತ (ವೀರಾಜಪೇಟೆ)